ಕರ್ನಾಟಕ ಸರ್ಕಾರ

ದಿನಾಂಕ : 20-03-2015

## ಯುಗಾದಿ ಹಬ್ಬ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಮಾರ್ಚ್ 20,**

ಸಡಗರದ ಸಂಭ್ರಮದ ಯುಗಾದಿ ಹಬ್ಬದ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಮನೆ ಮನೆಯಲ್ಲೂ ತಳಿರು ತೋರಣ. ಕಷ್ಟ ಸುಖಗಳನ್ನು ಸಮಾನತೆಯಿಂದ ಸ್ವೀಕರಿಸಬೇಕೆಂಬ ಸಂದೇಶ ಸಾರಲು ಮೆಲ್ಲಲು ಬೇವು ಬೆಲ್ಲದ ಮಿಶ್ರಣ. ವರ್ಷದಲ್ಲಿ ಅಡಗಿರುವ ಭವಿಷ್ಯ ತಿಳಿಯಲು ಬಯಸುವವರಿಗೆ ಸಾಂಪ್ರದಾಯಿಕ ಪಂಚಾಂಗ ಶ್ರವಣ. ಹಬ್ಬದೂಟಕ್ಕೆ ಹೋಳಿಗೆಯ ಹೂರಣ. ಇವು ನಮ್ಮ ಚಾಂದ್ರಮಾನ ಯುಗಾದಿಯ ವೈಶಿಷ್ಟಗಳಿಗೆ ಕಾರಣ. ಚಾಂದ್ರಮಾನ ಯುಗಾದಿಯ ಶುಭ ಸಂದರ್ಭದಲ್ಲಿ ರಾಜ್ಯದಲ್ಲಿ ಸರ್ವರಿಗೂ ಅಭಿವೃದ್ಧಿ ಮತ್ತು ಸಮೃದ್ಧಿಯ ಸದವಕಾಶಗಳು ದೊರೆಯಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

------------------------------